## ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ,
## ಪೀಠಾಸೀನ ಕೊಳ್ಳೇಗಾಲ

**SPL.C. 5080/2025**

| | | | | |
|---|---|---|---|---|
| **ಸಾಕ್ಷಿದಾರರ ಹೆಸರು** | : | ಮಹೇಶ್ | **ಪ್ರಮಾಣ ವಚನ ಭೋಧಿಸಿದ ದಿನಾಂಕ** | |
| **ತಂದೆ ಹೆಸರು** | : | ಮಸಣಶೆಟ್ಟಿ | 19.12.2025 | |
| **ವಯಸ್ಸು** | : | 40 ವರ್ಷ | | |
| **ವೃತ್ತಿ** | : | ಆಟೋ ಚಾಲಕ | **ಪ್ರಾ.ಸಾಃ** | 06 |
| **ವಾಸ ಸ್ಥಳ** | : | ಮಧುವನಹಳ್ಳಿ ಗ್ರಾಮ | **ಚಾ.ಸಾಃ** | 17 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ–**

ನಾನು ಚಾಸಾ 18 ರವರ ಜಮೀನನ್ನು ಗುತ್ತಿಗೆಗೆ ಪಡೆದು ಕಬ್ಬಿನ ಬೆಳೆ ಬೆಳೆದಿದ್ದೆ. ಸದರಿ ಜಮೀನು ಆರುವನಪುರದಲ್ಲಿ ಇರುತ್ತದೆ. ಕಬ್ಬು ಬೆಳೆ ಕಟಾವು ಮಾಡಲು ಚಾಸಾ 4 ರವರಿಗೆ ವಹಿಸಿದ್ದೆ. ದಿಃ 15.12.2024 ರಂದು ಚಾಸಾ 4 ರವರು ಕಬ್ಬು ಬೆಳೆ ಕಟಾವನ್ನು ಪ್ರಾರಂಭಿಸಿದರು. 4 ಜನ ಹೆಂಗಸರು, 8 ಜನ ಗಂಡಸರು ಕಬ್ಬು ಬೆಳೆ ಕಟಾವಿಗೆ ಬಂದಿದ್ದರು.

ದಿಃ 16.12.2024 ರಂದು ಚಾಸಾ 4 ರವರು ನನಗೆ ದೂರವಾಣಿ ಕರೆ ಮಾಡಿ ಕಬ್ಬು ಬೆಳೆ ಕಟಾವಿಗೆ ಬಂದಿದ್ದ ಒಬ್ಬ ಕೆಲಸಗಾರರಿಗೆ ವಿದ್ಯುತ್ ಶಾಕ್ ಆಗಿದೆ ಎಂದು ತಿಳಿಸಿದರು. ನಾನು ತಕ್ಷಣ ಜಮೀನಿನ ಬಳಿ ಹೋದೆ. ಅಲ್ಲಿ ಯಾರು ಇರಲಿಲ್ಲ. ನಂತರ ಚಾಸಾ 4 ರವರನ್ನು ವಿಚಾರಿಸಿದೆ. ಅವರು ಆಸ್ಪತ್ರೆಗೆ ದಾಖಲು ಮಾಡಿದ್ದೇನೆ ಎಂದು ತಿಳಿಸಿದರು. ದಾಖಲಾದ ವ್ಯಕ್ತಿ ಮೃತ ಪವಿತ್ರ ಆಗಿದ್ದರು. ಆಕೆ ಮೃತಪಟ್ಟಿದ್ದಾಳೆ ಎಂದು ತಿಳಿಸಿದರು. ನನ್ನ ಜಮೊನಿನ ಪಕ್ಕ ಆರೋಪಿಯ ಜಮೀನು ಇರುತ್ತದೆ. ಆರೋಪಿ ಜೋಳದ ಬೆಳೆ ಬೆಳೆದಿದ್ದನು. ಜಮೀನಿನ ಸುತ್ತ ಮುಳ್ಳಿನ ತಂತಿ ಬೇಲಿ ಹಾಕಿದ್ದನು. ನಿಪಿ11 ರಿಂದ 14ರ ಭಾವಚಿತ್ರಗಳಲ್ಲಿ ನನ್ನ ಜಮೀನು ಮತ್ತು ಆರೋಪಿಯ ಜಮೀನು ಹಾಗೂ ಮಧ್ಯದಲ್ಲಿ ಓಡಾಡುವ ಜಾಗ ಕಾಣಿಸುತ್ತದೆ. ನಾನು ಪೊಲೀಸರಿಗೆ

ಹೇಳಿಕೆ ಕೊಟ್ಟಿರುತ್ತೇನೆ. ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೊಳ್ಳೇಗಾಲ ರವರಿಂದ ಬಂದ ಮುಚ್ಚಿದ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಹೆಳಿಕೆಯನ್ನು ನಿಸಿ–5 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಸಿ–5(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ– ಶ್ರೀ ಎಂ ಎಂ ಕೆ ವಕೀಲರಿಂದ**

ನಾನು ಚಾಸಾ 18 ರವರಿಂದ ಜಮೀನನ್ನು ಗುತ್ತಿಗೆ ಪಡೆದಿರುವುದಕ್ಕೆ ದಾಖಲಾತಿ ಇರುವುದಿಲ್ಲ. ಚಾಸಾ 18 ರವರ ಹೆಸರಿನಲ್ಲಿ, ಅವರ ಕುಟುಂಬಸ್ಥರ ಹೆಸರಿನಲ್ಲಿ ಜಮೀನಿನ ಯಾವುದೇ ದಾಖಲಾತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ವ್ಯವಸಾಯ ಮಾಡಿರುವುದಕ್ಕೆ ನನ್ನ ಹೆಸರಿನಲ್ಲಿ ಪಹಣಿ ಇರುವುದಿಲ್ಲ. ಆರೋಪಿ ತನ್ನ ಜಮೀನಿಗೆ ಯಾವುದೇ ಮುಳ್ಳು ತಂತಿ ಬೇಲಿಗಳನ್ನು ಹಾಕಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನಿನ ಪಕ್ಕ ಕೆರೆ ಇರುತ್ತದೆ. ಅಲ್ಲಿಗೆ ಶೌಚಾಲಯಕ್ಕೆಂದು ಹೋಗುತ್ತಾರೆ. ಬೆಳೆ ಇದ್ದ ಜಮೀನಿಗೆ ಯಾರು ಶೌಚಾಲಯಕ್ಕೆ ಹೋಗುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಭಾವಚಿತ್ರಗಳಲ್ಲಿ ತೆವರಿ ಕಾಣಿಸುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಚಾಸಾ 4 ರವರು ನನಗೆ ಯಾವುದೇ ವಿಚಾರ ತಿಳಿಸಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ನನಗೆ ಅಕ್ಕ ಪಕ್ಕದ ಜಮೀನಿನವರು ಗೊತ್ತಿಲ್ಲ. ನಾನು ನಿಸಿ–5 ರಂತೆ ಸುಳ್ಳು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಮೃತ ಪವಿತ್ರಳ ಗಂಡನಿಗೆ ನಾನು ಹಣ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಚಾಸಾ 18 ರವರ ಜಮೀನಿನಲ್ಲಿ ಕಬ್ಬು ಬೆಳೆದಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ 4 ರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ